ಇ) ಈ ರೀತಿ ಕಾನೂನಿನ ವಿರುದ್ಧ ಕಟ್ಟಡ ನಿರ್ಮಾಣಕ್ಕೆ ಕಾರಣರಾದ ಅಧಿಕಾರಿಗಳು ಯಾರು.

ಈ) ಅವರುಗಳ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಮೈಸೂರಿನ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣ 1603 ಎಕರೆ ಭೂಸ್ವಾಧೀನ ಪಡಿಸಿ ಜಮೀನನ್ನು ಅಭಿವೃದ್ಧಿಪಡಿಸಿ 477 ಕೈಗಾರಿಕೆಗಳಿಗೆ ಯೋಜನೆಯನ್ನು ಕಾರ್ಯಗತಗೊಳಿಸಲು ಹಂಚಿಕೆ ಮಾಡಲಾಗಿದೆ.

ಆ) ಕೈಗಾರಿಕೆಗೆ ನಿಗದಿಪಡಿಸಿದ ಜಮೀನಿನಲ್ಲಿ ವಸತಿ ಕಟ್ಟಡಗಳನ್ನು ಕಟ್ಟಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಸಮಾಜ ಕಲ್ಯಾಣ ಇಲಾಖೆಯಲ್ಲಿ ಬ್ಯಾಕ್‌ಲಾಗ್ ಹುದ್ದೆಗಳು

4641 (5362) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇದ್ದ ಬ್ಯಾಕ್ ಲಾಗ್ ಹುದ್ದೆಗಳ ಸಂಖ್ಯೆ ಎಷ್ಟು? ವರ್ಷವಾರು ತಿಳಿಸುವುದು:

ಆ) ಅವುಗಳ ಪೈಕಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ಇ) ಇನ್ನೂ ಭರ್ತಿ ಮಾಡಬೇಕಾದ ಹುದ್ದೆಗಳ ಸಂಖ್ಯೆ ಎಷ್ಟು ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇದ್ದ ಪ.ಜಾ/ಪ.ವರ್ಗದ ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆಯ ವಿವರ.

ಕ್ರ.ಸಂ.	ಹುದ್ದೆ	ಪ.ಜಾತಿ	ಪ.ವರ್ಗ	ಒಟ್ಟು
1.	ಸೀನಿಯರ್ ವಾರ್ಡನ್	01	01	02
2.	ವಿದ್ಯಾರ್ಥಿನಿಲಯ ಮೇಲ್ವಿಚಾರಕರು	05	01	06
3.	ಬೆರಳಚ್ಚುಗಾರರು	02	01	03
4.	ವಾಹನ ಚಾಲಕರು	01	–	01
	ಒಟ್ಟು	09	03	12

ಆ) 12 ಬ್ಯಾಕ್ ಲಾಗ್ ಹುದ್ದೆಗಳನ್ನು ಈಗಾಗಲೇ ನಿಯಮಾನುಸಾರ ಭರ್ತಿ ಮಾಡಿ ನೇಮಕಾತಿ ಆದೇಶಗಳನ್ನು ನೀಡಲಾಗಿದೆ.

ಇ) ಅನ್ವಯಿಸುವುದಿಲ್ಲ.

ರಾಜ್ಯದಲ್ಲಿರುವ ಸಹಕಾರಿ ಸಂಸ್ಥೆಗಳಲ್ಲಿನ ಸಾಲ ವಸೂಲಾತಿ

4932 : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಹಕಾರಿ ಸಂಸ್ಥೆಗಳು ಎಷ್ಟು (ಜಿಲ್ಲಾವಾರು ವಿವರ ನೀಡುವುದು)?

ಆ) ಈ ಸಹಕಾರಿ ಸಂಸ್ಥೆಗಳಲ್ಲಿರುವ ಒಟ್ಟು ಬಂಡವಾಳವೆಷ್ಟು (ಸಂಸ್ಥೆವಾರು ವಿವರ ನೀಡುವುದು)

ಇ) ಈ ಸಹಕಾರಿ ಸಂಸ್ಥೆಗಳು ಎಷ್ಟು ಮೊತ್ತದ ಸಾಲವನ್ನು ನೀಡಿವೆ (ಸಂಸ್ಥೆವಾರು ವಿವರ ನೀಡುವುದು)

ಈ) ನೀಡಿರುವ ಸಾಲದಲ್ಲಿ ವಸೂಲಿಯಾದ ಹಣ ಎಷ್ಟು ವಸೂಲಿಯಾಗದಿದ್ದರೆ ಕಾರಣವೇನು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) ದಿನಾಂಕ: 31.03.2003 ರಲ್ಲಿದ್ದಂತೆ ರಾಜ್ಯದಲ್ಲಿ ಒಟ್ಟು 30525 ಸಹಕಾರ ಸಂಘ ಸಂಸ್ಥೆಗಳು ಇರುತ್ತದೆ ಜಿಲ್ಲಾವಾರು ಮಾಹಿತಿ ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ದಿನಾಂಕ 31.12.2003 ರಲ್ಲಿದ್ದಂತೆ ಎಲ್ಲಾ ಸಹಕಾರಿ ಸಂಸ್ಥೆಗಳು ಒಟ್ಟು ಷೇರು ಬಂಡವಾಳ ರೂ. 162732 ಕೋಟಿ ಇರುತ್ತದೆ.

2002–03ನೇ ಸಾಲಿನಲ್ಲಿ ಎಲ್ಲಾ ಸಹಕಾರ ಸಂಸ್ಥೆಗಳು ಅಂದಾಜು ರೂ. 19,123 ಕೋಟಿ ಸಾಲವನ್ನು ನೀಡಿದೆ.

ಇ) ರಾಜ್ಯದಲ್ಲಿ ಒಟ್ಟು 30,525 ಸಹಕಾರಿ ಸಂಘಗಳಿರುವುದರಿಂದ, ಯಾವ ಸಹಕಾರಿ ಸಂಘದ ಮಾಹಿತಿ ಬೇಕೆಂಬ ಬಗ್ಗೆ ನಿರ್ದಿಷ್ಟವಾಗಿ ತಿಳಿಸಿದರೆ ವಿವರಗಳನ್ನು ಸಲ್ಲಿಸಲಾಗುವುದು

ಈ) ನೀಡಿರುವ ಸಾಲದಲ್ಲಿ 2002–03 ನೇ ಸಾಲಿನಲ್ಲಿ ಅಂದಾಜು ರೂ. 14,702 ಕೋಟಿಗಳನ್ನು ವಸೂಲಾತಿ ಮಾಡಿರುತ್ತದೆ.

ರಾಜ್ಯದಲ್ಲಿ ಒಟ್ಟು 31,525 ಸಹಕಾರಿ ಸಂಘಗಳಿರುವುದರಿಂದ, ಯಾವ ಸಹಕಾರಿ ಸಂಘದ ಮಾಹಿತಿ ಬೇಕೆಂಬ ಬಗ್ಗೆ ನಿರ್ದಿಷ್ಟವಾಗಿ ತಿಳಿಸಿದರೆ ವಿವರಗಳನ್ನು ಸಲ್ಲಿಸಲಾಗುವುದು.

ವಸೂಲಾತಿ ಕಡಿಮೆಯಾಗಿರುವುದಕ್ಕೆ ಕಾರಣಗಳು

1. ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಪ್ರಕೃತಿ ವಿಕೋಪದಿಂದ ಬೆಳೆ ನಾಶವಾಗಿರುವುದು
2. ಸರಿಯಾದ ಭದ್ರತೆಯಿಲ್ಲದೆ ಸಾಲ ನೀಡಿರುವುದು
3. ಸಾಲದಲ್ಲಿ ಮರುಪಾವತಿ ಮಾಡಬೇಕೆಂಬ ಮನೋಭಾವ ಸದಸ್ಯರಲ್ಲಿ ಕಡಿಮೆಯಾಗಿರುವುದು
4. ಕೃಷಿಯೇತರ ಸಾಲಕ್ಕೂ ಸರ್ಕಾರವು ಬಡ್ಡಿ ಮನ್ನಾ ಮಾಡಬಹುದೆಂಬ ನಿರೀಕ್ಷೆ ಸಾಲ ಪಡೆದವರು ಹೊಂದಿರುವುದು.
5. ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗಳ ಬೇಜವಾಬ್ದಾರಿತನ.

ಕ್ರಮ ಸಂಖ್ಯೆ	ಜಿಲ್ಲೆ	ಒಟ್ಟು
1	2	3
1.	ಬೆಂಗಳೂರು–1	552
2.	ಬೆಂಗಳೂರು–2	1433
3.	ಬೆಂಗಳೂರು (ಗ್ರಾಮಾಂತರ)	1659
4.	ಬಳ್ಳಾರಿ	1035
5.	ಬೆಳಗಾಂ	3861

1	2	3
6.	ಬೀದರ್	820
7.	ಬಾಗಲಕೋಟೆ	1196
8.	ಬಿಜಾಪುರ	973
9.	ಚಿಕ್ಕಮಗಳೂರು	508
10.	ಚಿತ್ರದುರ್ಗ	689
11.	ಚಾಮರಾಜನಗರ	596
12.	ಧಾರವಾಡ	1012
13.	ದಾವಣಗೆರೆ	1242
14.	ಗದಗ	895
15.	ಗುಲ್ಬರ್ಗಾ	1498
16.	ಹಾಸನ	1161
17.	ಹಾವೇರಿ	916
18.	ಕೋಲಾರ	2265
20.	ಕೊಪ್ಪಳ	852
21.	ಮಂಡ್ಯ	1554
22.	ಕೊಡಗು	335
23.	ಮಂಗಳೂರು	627
24.	ಮೈಸೂರು	1581
25.	ರಾಯಚೂರು	641
26.	ಶಿವಮೊಗ್ಗ	975
27.	ತುಮಕೂರು	1370
28.	ಉಡುಪಿ	511
	ಒಟ್ಟು	**31525**

ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಹಳದಿ ಪಡಿತರ ಚೀಟಿ ವಿತರಣೆ

404 (3986) : ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿವಾಜಿನಗರ ವಿಧನ ಸಭಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ಎಷ್ಟು ಜನರಿಗೆ ಎ.ಪಿ.ಎಲ್ ಹಾಗೂ ಹಳದಿ ಪಡಿತರ ಚೀಟಿಗಳನ್ನು ಹಂಚಲಾಗಿದೆ?

ಆ) ಈ ವಿಧಾನ ಸಭಾ ಕ್ಷೇತ್ರದಲ್ಲಿರುವ ಹಲವಾರು ಬಡ ಕುಟುಂಬಗಳಿಗೆ ಕೊಳಚೆ ನಿವಾಸಿಗಳಿಗೆ ಹಳದಿ ಪಡಿತರ ಚೀಟಿಯನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?